₹ 5

14.08.2019 ಬುಧವಾರ
ಬೆಂಗಳೂರು | ಹುಬ್ಬಳ್ಳಿ | ಮಂಗಳೂರು
ದಾವಣಗೆರೆ | ಕಲಬುರಗಿ | ಬೆಳಗಾವಿ

@vishwavaninews
vishwavanitimely
epaper.vishwavani.news
vishwavani.news

ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಮಳೆ ಸುದ್ದಿ
ಪುಟ- 4,5

ಸಂ.ಪುಟ 6

ಬಿಎಸ್‌ವೈ ಕಡೆ ಬೊಟ್ಟು ಮಾಡಲು ಕುಮಾರಸ್ವಾಮಿಗೆ ಯಾವ ನೈತಿಕ ಅಧಿಕಾರವಿದೆ?

ಬೇಟೆ
ಜಯವೀರ ವಿಕ್ರಮ್ ಸಂಪತ್ ಗೌಡ

ಪ್ರಮುಖ ಸುದ್ದಿ

ಶ್ರೀನಗರದಲ್ಲಿ ಹೂಡಿಕೆದಾರರ ಸಮಾವೇಶ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರ ಆಡಳಿತ ವ್ಯವಸ್ಥೆಯು ಶ್ರೀನಗರದಲ್ಲಿ ಅಕ್ಟೋಬರ್ 12ರಿಂದ ಮೂರು ದಿನಗಳ ಕಾಲ ಜಾಗತಿಕ ಹೂಡಿಕೆದಾರರ ಶೃಂಗಸಭೆಯೊಂದನ್ನು ಆಯೋಜಿಸಲಿದೆ. ಕಾಶ್ಮೀರ ಕಣಿವೆಯು ತನ್ನ ಸಾಮರ್ಥ್ಯ, ಕಾರ್ಯತಂತ್ರ ಹಾಗೂ ಕಾರ್ಯಸಾಧ್ಯತೆಗಳನ್ನು ಜಾಗತಿಕ ಸಮುದಾಯದ ಎದುರು ಬಿಂಬಿಸಿಕೊಳ್ಳುವುದಕ್ಕೆ ಇದು ಮಹತ್ತರ ಅವಕಾಶ ಒದಗಿಸಲಿದೆ ಎಂದು ಕೈಗಾರಿಕಾ ವಲಯದ ಪ್ರಧಾನ ಕಾರ್ಯದರ್ಶಿ ನವೀನ್ ಚೌಧರಿ ತಿಳಿಸಿದ್ದಾರೆ.

ಶಶಿತರೂರ್ ವಿರುದ್ಧ ಬಂಧನ ವಾರೆಂಟ್

ಕೋಲ್ಕತಾ: ಲೋಕಸಭೆ ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಗೆದ್ದಲ್ಲಿ ಅದು 'ಹಿಂದೂ ಪಾಕಿಸ್ತಾನ' ರಚನೆಯ ಸನ್ನಿವೇಶವನ್ನು ನಿರ್ಮಿಸುತ್ತದೆ ಎಂದು ನೀಡಿದ್ದ ಹೇಳಿಕೆಗೆ ಕೋಲ್ಕತಾ ಕೋರ್ಟ್ ಬಂಧನ ವಾರೆಂಟ್ ಹೊರಡಿಸಿದೆ.

ಮೋದಿ ಅವರನ್ನು ಹಿಂದಿಕ್ಕಿದ ಸನ್ನಿ !

ದೆಹಲಿ: ನಟಿ ಸನ್ನಿಲಿಯೋನ್ ಅವರು ಪ್ರಧಾನಿ ನರೇಂದ್ರ ಮೋದಿ ಹಾಗೂ ಶಾರೂಖ್ ಖಾನ್ ಅವರನ್ನ ಹಿಂದಕ್ಕೆ ಹಾಕಿ ಈ ವರ್ಷವೂ ಗೂಗಲ್ ಸರ್ಚ್‌ನಲ್ಲಿ ನಂಬರ್ ಒನ್ ಸ್ಥಾನ ಅಲಂಕರಿಸಿದ್ದಾರೆ. ಕಳೆದ ವರ್ಷವೂ ಗೂಗಲ್ ಟ್ರೆಂಡ್‌ನಲ್ಲಿ ಟಾಪ್‌ನಲ್ಲಿದ್ದರು. 'ಗೂಗಲ್ ಸರ್ಚ್' ನಲ್ಲಿ ನೆಟ್ಟಿಗರು ಸನ್ನಿ ಲಿಯೋಗ್ ಅವರ ಬಗೆಗಿನ ಸುದ್ದಿಯ ಬಗ್ಗೆ ಅತಿ ಹೆಚ್ಚು ಹುಡುಕಾಟ ನಡೆಸಿದ್ದಾರೆ.

ವಕ್ರತುಂಡೋಕ್ತಿ

ಹೇರಳ ಹಣವಿರುವ ಬಡವನಿಗೆ ಶ್ರೀಮಂತ ವ್ಯಕ್ತಿ ಎಂದು ಕರೆಯಬಹುದು.

ತಗ್ಗಿದ ಪ್ರವಾಹ | ಹಲವೆಡೆ ಜನಪ್ರತಿನಿಧಿಗಳಿಗೆ ಘೇರಾವ್ | ಗಡಿ ಭಾಗಕ್ಕೆ ತಲುಪದ ಪರಿಹಾರ ಸಾಮಗ್ರಿಗಳು | ಅನುದಾನಕ್ಕಾಗಿ ಕೇಂದ್ರದತ್ತ ಮೊರೆ | ವದಂತಿಗಳಿಗೆ ಕಿವಿಗೊಡದಂತೆ ಜನರಲ್ಲಿ ಅಧಿಕಾರಿಗಳ ಮನವಿ

ಹೊಸ ಬದುಕು ಕಟ್ಟಿಕೊಳ್ಳುವ ಹುಡುಕಾಟದಲ್ಲಿ ಸಂತ್ರಸ್ತರು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕರ್ನಾಟಕ ಕಂಡು ಕೇಳರಿಯದ ನೆರೆ ಹಾವಳಿಯಿಂದ ತತ್ತರಿಸಿದೆ. 17ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಉಂಟಾಗಿದ್ದ ಭೀಕರ ಪ್ರವಾಹ ಸಹಜ ಸ್ಥಿತಿಗೆ ಮರಳುತ್ತಿದ್ದರೂ ನೆರೆಯಿಂದಾದ ನಷ್ಟ ಮತ್ತು ಸಾವು ನೋವುಗಳು ಮಾತ್ರ ವಿಸ್ತರಿಸುತ್ತಲೇ ಇವೆ.

ರಾಜ್ಯದ ಬಹುತೇಕ ಕಡೆ ಮಳೆಯ ಪ್ರಮಾಣ ಕಡಿಮೆಯಾಗಿದ್ದು, ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳಲ್ಲಿ ಪರಿಹಾರ ಕಾರ್ಯಕ್ಕೆ ಚುರುಕು ಮುಟ್ಟಿಸಲಾಗುತ್ತಿದೆ. ಕೃಷ್ಣಾ ನದಿ ಪ್ರಾತದಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿಲ್ಲವಾದರೂ ಅಲ್ಲಲ್ಲಿ ಸಂತ್ರಸ್ತರಾದವರನ್ನು ರಕ್ಷಿಸುವ ಕಾರ್ಯ ಪ್ರಗತಿಯಲ್ಲಿದೆ. ಹಂಪಿಯಲ್ಲಿ ವಿದೇಶಿಗರು ಸೇರಿದಂತೆ 51ಜನರನ್ನು ರಕ್ಷಣೆ ಮಾಡಲಾಗಿದೆ. ರಾಜ್ಯಾದ್ಯಂತ ಸಂಗ್ರಹ ಮಾಡಿದ ಪರಿಹಾರ ಸಾಮಗ್ರಿಗಳನ್ನು ನೆರೆ ಪೀಡಿತರಿಗೆ ತಲುಪಿಸುವಲ್ಲಿ ಕೆಲ ಸಂಘ-ಸಂಸ್ಥೆಗಳು ಕಾರ್ಯನಿರತವಾಗಿವೆ.

ನೆರೆ ಪೀಡಿತರ ನೆರವಿಗೆ ಆಗಮಿಸಿದ ಜನಪ್ರತಿನಿಧಿಗಳ ವಿರುದ್ಧ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ ಘಟನೆಯೂ ಅನೇಕ ಕಡೆ ನಡೆದಿದೆ. ಪರಿಹಾರ ನೀಡುತ್ತಿದ್ದಾರೆ ಎಂಬ ಗುಲ್ಲು ಹಬ್ಬಿಸಿ ಗ್ರಾಮ ಪಂಚಾಯಿತಿ ಕಚೇರಿಗಳಿಗೆ ನಿರಾಶ್ರಿತರು ಎಡತಾಕಿದ ಘಟನೆಯೂ ಕೆಲ ಕಡೆ ನಡೆದಿದೆ. ನಿರಾಶ್ರಿತ ಶಿಬಿರಗಳಲ್ಲಿ ನೆರೆಪೀಡಿತರನ್ನು ಪೋಷಿಸುವ ಕಾರ್ಯ ನಡೆಯುತ್ತಿದೆ. ಪ್ರವಾಹದಲ್ಲಿ ಮತ್ತಷ್ಟು ಜನರು ಸಿಲುಕಿರಬಹುದು ಎಂಬ ನಿರೀಕ್ಷೆಯಿಂದ ರಕ್ಷಣಾ ಕಾರ್ಯ ನಡೆಸಲಾಗುತ್ತಿದೆ.

ಜನಪ್ರತಿನಿಧಿಗಳಿಗೆ ಘೇರಾವ್: ನೆರೆಪೀಡಿತ ಜನರ ನೆರವಿಗೆ ಬಾರದ ಜನಪ್ರತಿನಿಧಿಗಳ ವಿರುದ್ಧ ಸಂತ್ರಸ್ತರು ಆಕ್ರೋಶ ವ್ಯಕ್ತಪಡಿಸಿದ ಘಟನೆ ನಡೆದಿದೆ. ಉತ್ತರ ಕನ್ನಡ ಜಿಲ್ಲೆಯ ಪ್ರವಾಹ ಪೀಡಿತವಾಗಿದ್ದರೂ ಈವರೆಗೆ ಸಂಸದ ಅನಂತ ಕುಮಾರ್ ಹೆಗಡೆ ಸುಳಿವಿರಲಿಲ್ಲ. ಈ ನಡುವೆ ಉಂಚಳ್ಳಿ ಡ್ಯಾಂ ಒಡೆದುಹೋದ ಹಿನ್ನೆಲೆಯಲ್ಲಿ ಸಂತ್ರಸ್ತರ ಬಳಿ ತೆರಳಿ ಮನವಿ ಆಲಿಸುವಂತೆ ಅನಂತಕುಮಾರ್‌ಗೆ ಮನವಿ ಮಾಡಿದರೂ ಸ್ಪಂದಿಸಲಿಲ್ಲ. ಈ ಕಾರಣಕ್ಕೆ ಸಂತ್ರಸ್ತರು ಅವರ ವಿರುದ್ಧ ಕಿಡಿಕಾರಿದ ಘಟನೆಯ ವಿಡಿಯೊ ವೈರಲ್ ಆಗಿದೆ. ಬಾಗಲಕೋಟೆ ಶಾಸಕ ವೀರಣ್ಣ ಚರಂತಿ ಮಠ ಅವರ ವಿರುದ್ಧವೂ ಸಂತ್ರಸ್ತರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕಲಘಟಗಿ ಶಾಸಕ ನಿಂಬಣ್ಣನವರ್ ವಿರುದ್ಧವೂ ಆಕ್ರೋಶ ವ್ಯಕ್ತವಾಗಿದೆ. ಪ್ರವಾಹ ಪೀಡಿತ ಪ್ರದೇಶಗಳಿಗೆ ಪರಿಹಾರ ಘೋಷಣೆ ಮಾಡದ ಕೇಂದ್ರ ಸರಕಾರದ ವಿರುದ್ಧವೂ ಜನರು ಗುಡುಗಿದ್ದಾರೆ.

ಗಡಿಗೆ ತಲುಪದ ಪರಿಹಾರ: ನೆರೆ ಸಂತ್ರಸ್ತರಿಗಾಗಿ ರಾಜ್ಯಾದ್ಯಂತ ಸಂಗ್ರಹವಾಗುತ್ತಿರುವ ಪರಿಹಾರ ಸಾಮಗ್ರಿಗಳು ಗಡಿಭಾಗಕ್ಕೆ ತಲುಪುತ್ತಿಲ್ಲ ಎಂಬ ಕೂಗು ಕೇಳಿಬಂದಿದೆ.

→ 4

ಮಲಪ್ರಭಾ ನದಿಯ ಪ್ರವಾಹ ಕಡಿಮೆಯಾಗಿದ್ದು ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಕರ್ಲಕೊಪ್ಪ ಗ್ರಾಮದಲ್ಲಿ ಸಾಂಕ್ರಾಮಿಕ ರೋಗಗಳು ಹರಡದಂತೆ ಪೌಡರ್ ಸಿಂಪಡಿಸಲಾಯಿತು.

ಬಾಗಲಕೋಟೆ ಬೆಳಗಾವಿಗೆ ಹೆಚ್ಚು ಹಾನಿ

ಬೆಳಗಾವಿ ಜಿಲ್ಲೆಯಲ್ಲಿ 1.57 ಲಕ್ಷ ಹೆಕ್ಟೇರ್ ಬೆಳೆ ಹಾನಿ. ಮಳೆಯಿಂದ ಇದುವರೆಗೆ 13 ಜನ ಮೃತಪಟ್ಟಿದ್ದು, ನಾಲ್ವರು ನಾಪತ್ತೆಯಾಗಿದ್ದಾರೆ. ಒಟ್ಟು 14 ತಾಲೂಕುಗಳಲ್ಲಿ 491 ಪರಿಹಾರ ಕೇಂದ್ರಗಳನ್ನು ಸ್ಥಾಪನೆ. ಪ್ರವಾಹದಲ್ಲಿ ಸಿಲುಕಿದ್ದ 50,554 ಪ್ರಾಣಿಗಳನ್ನು ರಕ್ಷಿಸಲಾಗಿದ್ದು, 133 ಪ್ರಾಣಿಗಳು ಮೃತಪಟ್ಟಿದ್ದು, 266 ಜಾನುವಾರು ಮೃತಪಟ್ಟಿವೆ. ಬಾಗಲಕೋಟೆ ಜಿಲ್ಲೆಯಲ್ಲಿ193 ಗ್ರಾಮಗಳು ಜಲಮಯ, ಮೂವರು ಸಾವು. 1,36,508 ಸಂತ್ರಸ್ತರ ರಕ್ಷಣೆ. 224 ಪರಿಹಾರ ಕೇಂದ್ರಗಳ ಸ್ಥಾಪನೆ. 69,473 ಜಾನುವಾರಗಳ ರಕ್ಷಿಸಿದ್ದು, 66 ಜಾನುವಾರುಗಳು ಮೃತಪಟ್ಟಿವೆ. 20 ಸಾವಿರ ಹೆಕ್ಟೇರ್ ಬೆಳೆ ಹಾನಿಯಾಗಿವೆ ಎಂದು ಅಂದಾಜಿಸಲಾಗಿದೆ.

ಸಿಎಂ ಪರಿಹಾರ ನಿಧಿಗೆ ₹2.69 ಕೋಟಿ ದೇಣಿಗೆ

ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಪ್ರಕೃತಿ ವಿಕೋಪದ ಸಂತ್ರಸ್ತರ ನೆರವಿಗಾಗಿ ಆ.9 ರಿಂದ ಈವರೆಗೆ 2,69,59,825 ರೂಪಾಯಿ ದೇಣಿಗೆ ಸಂಗ್ರಹವಾಗಿದೆ. ಇದರೊಂದಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿ ಖಾತೆಯಲ್ಲಿ 101.7 ಕೋಟಿ ರೂಪಾಯಿ ಲಭ್ಯವಿದೆ. 28 ಡಿ. ಡಿ. ಗಳ ಮೂಲಕ 1.83 ಕೋಟಿ ರು ಸೇರಿ 2.50 ಕೋಟಿ ರು. ಸಂಗ್ರಹವಾಗಿದೆ.

ಅನ್ನದಾತರಿಗೆ ನೆಮ್ಮದಿ ನೀಡದ ಸಾಲಮನ್ನಾ

ರೈತರ ಸಾಲ ಮನ್ನಾ ಯೋಜನೆಗೆ ಬಿಡುಗಡೆಯಾಗದ ಹಣ | ಶೇ.30ರಷ್ಟು ರೈತರಿಗೆ ತಲುಪದ ಯೋಜನೆ

ಪ್ರಭಾಕರ ಟಿ.ಬೆಂಗಳೂರು

ಜೆಡಿಎಸ್- ಕಾಂಗ್ರೆಸ್ ಸಮ್ಮಿಶ್ರ ಸರಕಾರದ ಅವಧಿಯಲ್ಲಿ ಘೋಷಣೆಯಾಗಿದ್ದ ಮಹತ್ವಾಕಾಂಕ್ಷೆ ರೈತರ ಸಾಲ ಮನ್ನಾ ಯೋಜನೆ ಅಡಿಯಲ್ಲಿ ಶೇ.30ಕ್ಕೂ ಅಧಿಕ ರೈತರ ಖಾತೆಗಳಿಗೆ ಇನ್ನೂ ಹಣ ಸಂದಾಯವಾಗಿಲ್ಲ.

ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ ಅವರ ಮಹತ್ವಾಕಾಂಕ್ಷೆ ಯೋಜನೆಯಾದ ರೈತರ ಸಾಲಮನ್ನಾ ಇದುವರಿಗೂ ಶೇ.70 ರೈತರಿಗಷ್ಟೇ ಅನುಕೂಲವಾಗಿದೆ. ರಾಷ್ಟ್ರೀಕೃತ ಬ್ಯಾಂಕಿನ 7,55,896 ಹಾಗೂ ಸಹಕಾರ ಸಂಘ ಬ್ಯಾಂಕಿನ 6,30,574 ರೈತರ ಖಾತೆಗಳಿಗೆ ಇನ್ನೂ ಹಣ ಬಿಡುಗಡೆಯಾಗಿಲ್ಲ. ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಸಾಲ ಪಡೆದಿರುವ ಒಟ್ಟು 16,34 ಲಕ್ಷ ಅರ್ಹ ರೈತರ ಪೈಕಿ 8,78,896 ರೈತರಿಗೆ ಹಾಗೂ ಸಹಕಾರ ಸಂಘ ಬ್ಯಾಂಕಿನ ಸಾಲ ಪಡೆದಿರುವ ಒಟ್ಟು 19,10,146 ಅರ್ಹ ರೈತರ ಪೈಕಿ 12,79,572 ರೈತರ ಖಾತೆಗಳಿಗೆ ಈವರೆಗೆ ಹಣ ಜಮೆಯಾಗಿದೆ.

ರಾಷ್ಟ್ರೀಕೃತ ಬ್ಯಾಂಕಿನ 16.34 ಲಕ್ಷ ರೈತರು ಹಾಗೂ ಸಹಕಾರಿ ಸಂಘ ಬ್ಯಾಂಕಿನ 19,10,146 ರೈತರು ಸಾಲ ಮನ್ನಾಗೆ ಅರ್ಹರಾಗಿದ್ದಾರೆ ಎಂದು ಆಯಾ ಬ್ಯಾಂಕಿನ ಅಧಿಕಾರಿಗಳೇ ತಿಳಿಸಿದ್ದಾರೆ. ರಾಷ್ಟ್ರೀಕೃತ ಬ್ಯಾಂಕ್ ಹಾಗೂ ಸಹಕಾರಿ ಸಂಘದ ಬ್ಯಾಂಕುಗಳೆರಡೂ ಸೇರಿ ಒಟ್ಟು 35,44,146 ರೈತರ ಪೈಕಿ ಶೇ.70 ರೈತರ ಸಾಲವಷ್ಟೇ ಮನ್ನಾವಾಗಿದೆ.

ರಾಷ್ಟ್ರೀಕೃತ ಬ್ಯಾಂಕಿನಲ್ಲಿ 2009ರ ಏ.1ರ ನಂತರ 2017ರ ಡಿ.31ರವರೆಗೆ ರೈತರು ಪಡೆದಿರುವ 2 ಲಕ್ಷ ರು.ವರೆಗಿನ ಸುಸ್ತಿ ಬೆಳೆ ಸಾಲ ಪಡೆದವರು ಸಾಲ ಮನ್ನಾ ಯೋಜನೆಗೆ ಅರ್ಹರಾಗಿರುತ್ತಾರೆ. ರೈತರ ಸಾಲಮನ್ನಾ ಯೋಜನೆಯನ್ನು ತಡೆಯಿಡಿಯುವುದಿಲ್ಲ. ಎಲ್ಲ ಅರ್ಹ ಫಲಾನುಭವಿಗಳ ಸಾಲ ಮನ್ನಾ ಆಗಲಿದೆ ಎಂದು ಸಿಎಂ ಯಡಿಯೂರಪ್ಪ ಅಭಯ ನೀಡಿದ್ದರು. ರಾಜಕೀಯದಲ್ಲಿ ಆದ ಬದಲಾವಣೆಯಿಂದ ಮೈತ್ರಿ ಸರಕಾರ ಪತನಗೊಂಡು ಯಡಿಯೂರಪ್ಪ ನೇತೃತ್ವದ ಸರಕಾರ ರಚನೆಗೊಂಡು ಮೂರು ವಾರಗಳು ಕಳೆದರೂ ಈ ಯೋಜನೆ ನನೆಗುದಿಗೆ ಬಿದ್ದಿರುವುದು ರೈತರನ್ನು ಇನ್ನಷ್ಟು ಚಿಂತೆಗೆ ದೂಡಿದೆ.

ರೈತರ ಸಾಲ ಮನ್ನಾಕ್ಕಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ 6,139 ಕೋಟಿ ರೂ. ಹಾಗೂ ಸಹಕಾರಿ ಸಂಘದ ಬ್ಯಾಂಕ್‌ಗಳಿಗೆ 5,621 ಕೋಟಿ ರೂ.ನೀಡಲಾಗಿದೆ. ಕಂದಾಯ ಇಲಾಖೆಗೆ ನೀಡಿದ್ದ 7,300 ಕೋಟಿ ರೂ.ಪೈಕಿ 6,139 ಕೋಟಿ ರು.ಗಳನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ರೈತರ ಸಾಲ ಮನ್ನಾದ ಹಣ ಸಂದಾಯವಾಗಿದ್ದು, ಉಳಿದ 1,161 ಕೋಟಿ ರು.ಇದೆ ಎಂದು ಕಂದಾಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಸಾಲಮನ್ನಾಕ್ಕಾಗಿ ಬ್ಯಾಂಕಿಗೆ ಅಗತ್ಯ ದಾಖಲೆಗಳನ್ನು ಸಲ್ಲಿಸಿ ವರ್ಷ ಕಳೆದಿದೆ. ಗ್ರಾಮದಲ್ಲಿ ಕೆಲವರ ಸಾಲ ಮನ್ನಾ ಆಗಿದೆ. ಬ್ಯಾಂಕಿನಲ್ಲಿ 1.40 ಲಕ್ಷ ಬೆಳೆ ಸಾಲ ಮಾಡಿದ್ದೇನೆ. ಸರಕಾರವೂ ಬದಲಾಗಿದೆ. ಇದು ಮನ್ನಾ ಆಗುತ್ತೋ ಇಲ್ಲವೋ ಎಂಬ ಆತಂಕ ಎದುರಾಗಿದೆ.
- ಆಂಜನೇಯರೆಡ್ಡಿ ರೈತ ಕೋಲಾರ

ಲೋಕ ಶಿಕ್ಷಣ ಟ್ರಸ್ಟ್‌ನ ಮಾಜಿ ಅಧ್ಯಕ್ಷ ಉಮೇಶ್ ಭಟ್ ನಿಧನ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಲೋಕ ಶಿಕ್ಷಣ ಟ್ರಸ್ಟ್ ಮಾಜಿ ಅಧ್ಯಕ್ಷ ಹಾಗೂ ಅಂಕೋಲಾ ಕ್ಷೇತ್ರದ ಮಾಜಿ ಶಾಸಕರಾದ ಉಮೇಶ್ ಭಟ್ ಅವರು ತೀವ್ರ ಹೃದಯಾಘಾತದಿಂದ ಮಂಗಳವಾರ ನಿಧನ ಹೊಂದಿದರು.

ಮಂಗಳವಾರ ಸಂಜೆ ಬೆಂಗಳೂರಿನ ನಿವಾಸದಲ್ಲಿ ಹೃದಯಾಘಾತವಾಗಿದ್ದು, ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೇ ಕೊನೆಯುಸಿರೆಳೆದರು. ಉಮೇಶ್ ಅವರ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 2 ಗಂಟೆ ಹೆಬ್ಬಾಳದ ಚಿತಾಗಾರದಲ್ಲಿ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಉಮೇಶ್ ಭಟ್ (73) ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಬಾವಿಕೆರೆ ಮೂಲದವರು. ಕೆಪಿಸಿಸಿ ಜಂಟಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದ ಅವರು ಶಿಕ್ಷಣ ಹಾಗೂ ಮಾಧ್ಯಮ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ರಾಜಧಾನಿ ಬೆಂಗಳೂರಿನ ಸಂಚಾರ ದಟ್ಟಣೆ ನೀಗಿಸಲು ಜಾರಿಗೆ ತಂದ ಮೆಟ್ರೋ ನಿಗಮದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಉಮೇಶ್ ಭಟ್, ಹಲವು ಸಂಘಟನೆಗಳಲ್ಲಿ ಸಕ್ರಿಯರಾಗಿದ್ದರು. ಯಲ್ಲಾಪುರದ ವಿಶ್ವದರ್ಶನ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ಹಾಗೂ ಶಿರಸಿಯ ಲೋಕಧ್ವನಿ ಪತ್ರಿಕೆಯ ಮಾಲೀಕರಾಗಿದ್ದರು.

ಬೆಂಗಳೂರಿನಲ್ಲಿ ವಾಸವಿದ್ದ ಉಮೇಶ್ ಭಟ್, ಲೋಕ ಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಸದ್ಯ ಲೋಕ ಶಿಕ್ಷಣ ಟ್ರಸ್ಟ್‌ನಲ್ಲಿ ಧರ್ಮದರ್ಶಿಯಾಗಿದ್ದರು.

ಅವರು 1989ರಲ್ಲಿ ಅಂಕೋಲಾ-ಶಿರಸಿ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ, ಗೆಲುವು ಸಾಧಿಸಿದ್ದರು. ಲೋಕಶಿಕ್ಷಣ ಟ್ರಸ್ಟ್ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಯು.ಬಿ ವೆಂಕಟೇಶ್ ಅವರು ಉಮೇಶ್ ಭಟ್ ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

ಸಿಕ್ಕಿಂ: ಎಸ್‌ಡಿಎಫ್‌ನ ಹತ್ತು ಶಾಸಕರು ಬಿಜೆಪಿ ಸೇರ್ಪಡೆ

BHARATIYA JANATA PARTY
BHARATIYA JA

ದೆಹಲಿ: ಒಟ್ಟು 13 ಶಾಸಕರ ಬಲ ಹೊಂದಿದ್ದ ಸಿಕ್ಕಿಂ ಡೆಮಾಕ್ರಟಿಕ್ ಫ್ರಂಟ್ (ಎಸ್‌ಡಿಎಫ್) ಪಕ್ಷದ 10 ಶಾಸಕರು ಭಾರತೀಯ ಜನತಾಪಕ್ಷಕ್ಕೆ ಮಂಗಳವಾರ ಸೇರ್ಪಡೆಗೊಂಡಿದ್ದಾರೆ.

ಇತ್ತೀಚಿನ ಸಿಕ್ಕಿಂ ವಿಧಾನಸಭೆ ಚುನಾವಣೆಯಲ್ಲಿ ಒಂದೂ ಸ್ಥಾನ ಗೆಲ್ಲದಿದ್ದ ಬಿಜೆಪಿಗೆ ಈ ಬೆಳವಣಿಗೆಯಿಂದಾಗಿ ರಾಜ್ಯದಲ್ಲಿನ ಪ್ರಮುಖ ವಿರೋಧ ಪಕ್ಷದ ಸ್ಥಾನಮಾನ ದಕ್ಕಲಿದೆ.ಬಿಜೆಪಿ ಕಾರ್ಯಾಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಭೇಟಿ ಮಾಡಿದ ಸದರಿ ಶಾಸಕರು, ಪಕ್ಷದ ಪ್ರಧಾನ ಕಾರ್ಯದರ್ಶಿ ಹಾಗೂ ಈಶಾನ್ಯ ಭಾರತದಲ್ಲಿನ ಪಕ್ಷದ ವ್ಯವಹಾರಗಳ ಉಸ್ತುವಾರಿಯಾಗಿರುವ ರಾಮ್ ಮಾಧವ್ ಸಮ್ಮುಖದಲ್ಲಿ ಬಿಜೆಪಿಗೆ ಸೇರ್ಪಡೆಗೊಂಡಿದ್ದಾರೆ.

ಪಕ್ಷವೊಂದರ ಮೂರನೇ ಎರಡರಷ್ಟು ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯ ಶಾಸಕರು ಮತ್ತೊಂದು ಪಕ್ಷಕ್ಕೆ ಸೇರಿಕೊಂಡರೆ ಅದು ಪಕ್ಷಾಂತರ ನಿಷೇಧ ಕಾನೂನಿನ ಉಲ್ಲಂಘನೆಯಾಗುವುದಿಲ್ಲ ಎಂಬುದಿಲ್ಲಿ ಉಲ್ಲೇಖನೀಯ.

ಪವನ್ ಕುಮಾರ್ ಚಾಮ್ಲಿಂಗ್ ನೇತೃತ್ವದ ಎಸ್‌ಡಿಎಫ್ ಸಿಕ್ಕಿಂ ರಾಜ್ಯವನ್ನು 25 ವರ್ಷಗಳವರೆಗೆ ಆಳಿದ್ದು, ಸುದೀರ್ಘ ಕಾಲಾವಧಿವರೆಗೆ ಸೇವೆ ಸಲ್ಲಿಸಿದ ಭಾರತದ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆ ಚಾಮ್ಲಿಂಗ್ ಅವರಿಗೆ ದಕ್ಕಿದೆಯಾದರೂ, ಇತ್ತೀಚಿನ ಚುನಾವಣೆಯಲ್ಲಿ ಅವರು ಅಧಿಕಾರ ಕಳೆದುಕೊಂಡಿದ್ದರು. 32 ಸದಸ್ಯಬಲದ ಸಿಕ್ಕಿಂ ವಿಧಾನಸಭೆಯಲ್ಲಿ ಅವರ ಪಕ್ಷ 15 ಸ್ಥಾನಗಳನ್ನು ಗೆದ್ದಿದ್ದರೆ, ಅವರ ಎದುರಾಳಿ ಸಿಕ್ಕಿಂ ಕ್ರಾಂತಿಕಾರಿ ಮೋರ್ಚ 17 ಸ್ಥಾನಗಳನ್ನು ಗೆದ್ದಿತ್ತು.

ಆದರೆ, ಇಬ್ಬರು ಎಸ್‌ಡಿಎಂ ಸದಸ್ಯರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದ ಕಾರಣ, ಶಾಸನಸಭೆಯಲ್ಲಿ ಪಕ್ಷದ ಸದಸ್ಯಬಲ 13ಕ್ಕೆ ಇಳಿದಿತ್ತು.

ಅನರ್ಹ ಶಾಸಕರ ಅರ್ಜಿ ತುರ್ತು ವಿಚಾರಣೆಗೆ ನಕಾರ

ಬೆಂಗಳೂರು: ಅನರ್ಹ ಶಾಸಕರ ಅರ್ಜಿಗಳನ್ನು ತುರ್ತಾಗಿ ವಿಚಾರಣೆ ನಡೆಸಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಪೀಠ ಮಂಗಳವಾರ ತಿಳಿಸಿದೆ.

ಸ್ಪೀಕರ್ ರಮೇಶ್‌ಕುಮಾರ್ ಕಾಂಗ್ರೆಸ್‌ನ 14 ಹಾಗೂ ಜೆಡಿಎಸ್‌ನ 3 ಶಾಸಕರನ್ನು ಅನರ್ಹಗೊಳಿಸಿದ್ದರು. ಈ ಅದೇಶ ಪ್ರಶ್ನಿಸಿ ಶಾಸಕರು ಸುಪ್ರೀಂ ಕೋರ್ಟ್ ಕದ ತಟ್ಟಿದ್ದರು. ತುರ್ತಾಗಿ ಅರ್ಜಿಯ ವಿಚಾರಣೆ ನಡೆಸಬೇಕು ಎಂದು ಮನವಿ ಮಾಡಿದ್ದರು. ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಮೂರ್ತಿ ರಂಜನ್ ಗೊಗೊಯ್ ಅವರು, ಅಯೋಧ್ಯೆ ರಾಮ ಜನ್ಮಭೂಮಿ ಪ್ರಕರಣ ಸಂಬಂಧ ಪ್ರತಿದಿನ ವಿಚಾರಣೆ ನಡೆಯುತ್ತಿದ್ದು, ಅನರ್ಹ ಶಾಸಕರ ಅರ್ಜಿಗಳನ್ನು ತುರ್ತಾಗಿ ವಿಚಾರಣೆ ನಡೆಸಲು ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ.

ಶೀಘ್ರದಲ್ಲೇ ವಿಚಾರಣೆ ದಿನಾಂಕವನ್ನು ನಿಗದಿಪಡಿಸುತ್ತೇವೆ. ಸಾಧ್ಯವಾದರೆ ಮತ್ತೊಂದು ಪೀಠದಲ್ಲಿ ವಿಚಾರಣೆಗೆ ಅವಕಾಶ ಕಲ್ಪಿಸಲಾಗುವುದು. ಈ ಬಗ್ಗೆ ರಿಜಿಸ್ಟ್ರಾರ್ ಬಳಿ ವಿಚಾರಣೆ ದಿನಾಂಕ ನಿಗದಿ ಮಾಡಿ ಎಂದು ಪೀಠ ಅರ್ಜಿದಾರರ ಪರ ವಕೀಲರಿಗೆ ಸೂಚಿಸಿದೆ.

KANVA
KANVA MART LTD.
Regd. Office: # 361, Above Kanva Mart,
19th Main, Adj. Diacon Hospital,
Rajajinagar 1st Block, , Bengaluru - 560 010.
GOWRI GANESHA FESTIVAL OFFER
Mens wear | Womens wear | Kids wear
End of the Season Sale
50% discount
WANTED
MARKETING EXECUTIVES
all over Karnataka
Call: South Karanataka
+91-63648 92411
North Karanataka
+91-63648 92406
+91-63648 92404

ಅನಂತಕುಮಾರ ಅವರ ಬಳಿಕ ಕೇಂದ್ರದಲ್ಲಿ ರಾಜ್ಯದ ಪ್ರಭಾವಿ ವ್ಯಕ್ತಿ

ರಾಜ್ಯ ರಾಜಕಾರಣದ ಮೇಲೆ ಸಂತೋಷ್ ಕಣ್ಣು!

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದೆಹಲಿ ಬಿಜೆಪಿಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸುವ ವ್ಯಕ್ತಿಯ ಹುಡುಕಾಟದಲ್ಲಿದ್ದ ಸಮಯದಲ್ಲಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದ ಬಿ.ಎಲ್ ಸಂತೋಷ್ ಇನ್ನು ರಾಜ್ಯ-ಕೇಂದ್ರದ ನಡುವಿನ ಸೇತುವೆಯಾಗಿ ಕಾರ್ಯನಿರ್ವಹಿಸುವುದು ಖಚಿತವಾಗಿದೆ.

ಬಿಜೆಪಿ ರಾಷ್ಟ್ರಾಧ್ಯಕ್ಷ ಸ್ಥಾನದ ಬಳಿಕ 'ಪವರ್ ಫುಲ್ ಪೋಸ್ಟ್' ಎಂದೇ ಹೇಳುವ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ರಾಮ್‌ಲಾಲ್ ಬಳಿಕ ಬಿ.ಎಲ್ ಸಂತೋಷ್‌ರನ್ನು ನೇಮಿಸಲಾಗಿದೆ. ಇದೀಗ ಪಕ್ಷ ಸಂಘಟನೆಯೊಂದಿಗೆ ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ಸರಕಾರದ ಆಗು ಹೋಗುಗಳ ಬಗ್ಗೆ ನಿಗಾವಹಿಸುವ ಹೆಚ್ಚುವರಿ ಜವಾಬ್ದಾರಿಯನ್ನೂ ರಾಷ್ಟ್ರಾಧ್ಯಕ್ಷ ಅಮಿತ್ ಶಾ, ಸಂತೋಷ್ ಜೀಗೆ ವಹಿಸಿದ್ದಾರೆ ಎನ್ನುವ ಮಾತುಗಳು ದೆಹಲಿ ವಲಯದಲ್ಲಿ ಕೇಳಿಬಂದಿದೆ.

ಈ ಹಿಂದೆ ಬಿಜೆಪಿ ಸರಕಾರದ ಸುತ್ತ ಹಲವು ವಿವಾದಗಳು ಸುತ್ತಿಕೊಂಡಿತ್ತು. ಇದರೊಂದಿಗೆ ಭ್ರಷ್ಟಾಚಾರದ ಆರೋಪವೂ ಕೇಳಿಬಂದಿತ್ತು. ಆದ್ದರಿಂದ ಈ ಬಾರಿ ವಿವಾದಕ್ಕೆ ಯಾವುದೇ ಕಾರಣಕ್ಕೂ ಅವಕಾಶ ನೀಡುವುದು ಬೇಡ ಎನ್ನುವ ನಿರ್ಧಾರಕ್ಕೆ, ಅಮಿತ್ ಶಾ ಬಂದಿದ್ದಾರೆ. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರಕಾರ ಪ್ರತಿ ಹೆಜ್ಜೆಯನ್ನು ಸೂಕ್ಷ್ಮವಾಗಿ ಗಮನಿಸಲು ತೀರ್ಮಾನಿಸಿರುವ ಅವರು, ಈ ಜವಾಬ್ದಾರಿಯನ್ನು ಸಂತೋಷ್ ಹೆಗಲಿಗೆ ಹಾಕಿದ್ದಾರೆ. ಆದ್ದರಿಂದ ರಾಜ್ಯ ಸರಕಾರದ ಬಗ್ಗೆ ವಾರಕ್ಕೆ ಒಮ್ಮೆ ಅಥವಾ ತಿಂಗಳಿಗೆ ಎರಡು ಬಾರಿ ಅಮಿತ್ ಶಾಗೆ ಸಂತೋಷ್ ವರದಿ ಮಂಡಿಸಲಿದ್ದಾರೆ ಎನ್ನುವ ಮಾತುಗಳು ಕೇಳಿಬಂದಿದೆ.

ಶಾ ಹೊರೆ ಇಳಿಸಲು ಕೇಂದ್ರಕ್ಕೆ ಸಂತೋಷ್: ಪ್ರಧಾನ ಕಾರ್ಯದರ್ಶಿಯಾಗಿ ಸುಮಾರು 13 ವರ್ಷ ಕಾರ್ಯನಿರ್ವಹಿಸಿದ್ದ ರಾಮ್‌ಲಾಲ್ ಅವರ ಸ್ಥಾನವನ್ನು ಸಂತೋಷ್ ಅವರಿಗೆ ನೀಡಲಾಗಿದೆ. ಸಂಘಟನೆಯಲ್ಲಿ ಪ್ರಮುಖ ಪಾತ್ರವಹಿಸುವ ಈ ಮಹತ್ವದ ಜವಾಬ್ದಾರಿಯನ್ನು ಸಂತೋಷ್ ಹೆಗಲಿಗೆ ಹಾಕಲು ಅವರ ಪಕ್ಷ ನಿಷ್ಠೆ, ಡೈನಾಮಿಕ್ ನಾಯಕತ್ವ ಹಾಗೂ ಕಠಿಣ ಪರಿಸ್ಥಿತಿಯಲ್ಲಿಯೂ ಸಮಚಿತ್ತದಿಂದ ಸಂದರ್ಭ 'ನಿಭಾಯಿಸುವ' ಚತುರತೆ ಕಾರಣ. ಇದರೊಂದಿಗೆ ಹಿಂದಿ-ಇಂಗ್ಲಿಷ್ ಭಾಷೆಯ ಮೇಲಿರುವ ಹಿಡಿತ, ಆರ್‌ಎಸ್‌ಎಸ್‌ನೊಂದಿಗೆ ನಿಕಟ ಸಂಪರ್ಕವೂ ಈ ಹುದ್ದೆಗೆ ಬರುವಲ್ಲಿ ಮಹತ್ವದ ಪಾತ್ರವಹಿಸಿದೆ.

ಗೃಹ ಸಚಿವರಾಗಿರುವ ಅಮಿತ್ ಶಾ ಅವರಿಗೆ ಮುಂದಿನ ದಿನದಲ್ಲಿ ಸಂಪೂರ್ಣವಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳುವುದು ತುಸು ಕಷ್ಟವಾಗಲಿದೆ. ಆದ್ದರಿಂದ ಪಕ್ಷ ಸಂಘಟನೆ ಹಾಗೂ ಮುಂದಿರುವ ಚುನಾವಣೆಗಳಲ್ಲಿ ಬಿಜೆಪಿ ಗೆಲ್ಲುವ ರೀತಿ ರಣತಂತ್ರ ರೂಪಿಸುವುದಕ್ಕೆ ಅಮಿತ್ ಶಾಗೆ ನೆರವಾಗಲಿದ್ದಾರೆ ಎನ್ನುವ ಕಾರಣಕ್ಕೆ ಚಿಕ್ಕವಯಸ್ಸಿನಲ್ಲಿಯೇ ಈ ಜವಾಬ್ದಾರಿ ನೀಡಲಾಗಿದೆ.

ಕೇಂದ್ರದಲ್ಲಿ ರಾಜ್ಯದ ಪ್ರಭಾವ: ಅನಂತ ಕುಮಾರ ಅವರ ಬಳಿಕ ದೆಹಲಿ ರಾಜಕಾರಣದಲ್ಲಿ ರಾಜ್ಯವನ್ನು ಪ್ರತಿನಿಧಿಸುವವರು ಯಾರು ಎನ್ನುವ ಪ್ರಶ್ನೆ ಮೂಡಿತ್ತು. ಆದರೆ ಇದೀಗ ಅಮಿತ್ ಶಾ, ಮೋದಿ ಹಾಗೂ ನಡ್ಡಾ ನಂತರದ ಸ್ಥಾನವನ್ನು ಸಂತೋಷ್ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದರೊಂದಿಗೆ ಶಾ ಹಾಗೂ ಮೋದಿ ಅವರೊಂದಿಗೆ ನಿಕಟ ಸಂಪರ್ಕ ಹೊಂದಿರುವುದರಿಂದ ಸಂತೋಷ್ ಅವರ ಮಾತು ಹೈಕಮಾಂಡ್ ಮಟ್ಟದಲ್ಲಿ ಸುಲಭವಾಗಿ ನಡೆಯುತ್ತದೆ.

ಅನಂತಕುಮಾರ ಅವರು ಕೇಂದ್ರದ ನಾಯಕರೊಂದಿಗೆ ಉತ್ತಮ ಒಡನಾಟವಿದ್ದರೂ, ಯಡಿಯೂರಪ್ಪ-ಅನಂತಕುಮಾರ ಅವರ ನಡುವಿನ ಸ್ಪರ್ಧೆ ಬಗ್ಗೆ ನಾಯಕರಿಗೆ ತಿಳಿದಿದ್ದರಿಂದ ಅನಂತಕುಮಾರ ಅವರ ಎಲ್ಲ ಮಾತನ್ನು ಒಪ್ಪುತ್ತಿರಲಿಲ್ಲ. ಆದರೀಗ ಸಂತೋಷ್‌ಗೆ ಈ ರೀತಿಯ ಯಾವ ಸಮಸ್ಯೆಯೂ ಇಲ್ಲ. ಆದ್ದರಿಂದ ಇದೀಗ ಸಂತೋಷ್ ಅವರು ರಾಜ್ಯ ಬಿಜೆಪಿ ವಿಷಯದಲ್ಲಿ ತೆಗೆದುಕೊಳ್ಳುವ ನಿರ್ಧಾರವನ್ನು ಕೇಂದ್ರ ನಾಯಕರು ಒಪ್ಪುವುದರಲ್ಲಿ ಅನುಮಾನವಿಲ್ಲ ಎನ್ನುವ ಮಾತುಗಳು ಬಿಜೆಪಿ ವಲಯದಲ್ಲಿ ಕೇಳಿಬಂದಿದೆ.

ಪಕ್ಷದಲ್ಲಿ ಹಿಡಿತ ಸಾಧಿಸುವ ಲೆಕ್ಕಾಚಾರ

ಈಗಾಗಲೇ ರಾಷ್ಟ್ರ ರಾಜಕಾರಣದಲ್ಲಿ ಸಂತೋಷ್ ಅವರು ತಮ್ಮದೇ ಆದ ವರ್ಚಸ್ಸನ್ನು ಬೆಳೆಸಿಕೊಂಡಿದ್ದಾರೆ. ಆದ್ದರಿಂದ ಅವರು ರಾಜ್ಯ ರಾಜಕಾರಣಕ್ಕೆ ಬರುವ ಅವಕಾಶ ಸದ್ಯದ ಮಟ್ಟಿಗೆ ಸಾಧ್ಯವಿಲ್ಲ. ಈ ವಿಷಯ ಸಂತೋಷ್ ಜೀಗೂ ಖಚಿತವಾಗಿದೆ. ಆದರೆ ಕರ್ನಾಟಕ ಬಿಜೆಪಿ ಮೇಲೆ ತಮ್ಮ ಹಿಡಿತ ಸಾಧಿಸಲು ಹಾಗೂ ತಮ್ಮ ಆಪ್ತರಿಗೆ ಆಯಾಕಟ್ಟಿನ ಸ್ಥಳಗಳನ್ನು ಪಡೆಯಲು, ರಾಜ್ಯ ರಾಜಕಾರಣದಲ್ಲಿ ಆಸಕ್ತಿವಹಿಸಿದ್ದಾರೆ ಎನ್ನುವ ಮಾತುಗಳು ಬಿಜೆಪಿ ವಲಯದಲ್ಲಿ ಕೇಳಿಬಂದಿದೆ.

ನಾಳೆ ಡಿಸಿಗಳಿಂದಲೇ ಧ್ವಜಾರೋಹಣ!

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

- ಜಿಲ್ಲಾ ಉಸ್ತುವಾರಿ ಮಂತ್ರಿಗಳಿಲ್ಲದ ಕಾರಣ, ಈ ನಿರ್ಧಾರ
- ಧ್ವಜಾರೋಹಣ ಸಂಬಂಧ ಸರಕಾರಿ ಅದೇಶ ಹೊರಡಿಸಿರುವ ಸರಕಾರ
- ಪ್ರವಾಹ ಹಿನ್ನಲೆ ಸರಳವಾಗಿ ಆಚರಿಸಲು ಸೂಚನೆ

ರಾಜ್ಯದಲ್ಲಿ ಯಡಿಯೂರಪ್ಪ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದು 17 ದಿನ ಕಳೆಯುತ್ತ ಬಂದರೂ, ಜಿಲ್ಲಾ ಉಸ್ತುವಾರಿ ಸಚಿವರಿಲ್ಲದ ಕಾರಣ ಈ ಬಾರಿ ಸ್ವಾತಂತ್ರ್ಯ ದಿನಾಚರಣೆ ವೇಳೆ ಧ್ವಜಾರೋಹಣವನ್ನು ಜಿಲ್ಲಾಧಿಕಾರಿಗಳು ಮಾಡುವಂತೆ ಸರಕಾರಿ ಅದೇಶ ಹೊರಡಿಸಲಾಗಿದೆ.

ಹೌದು, ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದಿದ್ದರೂ ಇಲ್ಲಿಯವರೆಗೆ ಪೂರ್ಣ ಪ್ರಮಾಣದ ಸಚಿವ ಸಂಪುಟ ರಚನೆಯಾಗಿಲ್ಲ, ಆದ್ದರಿಂದ ಜಿಲ್ಲಾ ಉಸ್ತುವಾರಿ ಸಚಿವರ ನೇಮಕವೂ ಆಗಿಲ್ಲ. ಈ ಹಿನ್ನೆಲೆಯಲ್ಲಿ ಈ ಬಾರಿಯ ಸ್ವಾತಂತ್ರ್ಯ ದಿನಾಚರಣೆ ವೇಳೆ ಸಚಿವರು ಇಲ್ಲದೇ ಇರುವುದರಿಂದ ಜಿಲ್ಲಾಧಿಕಾರಿಗಳೇ ಧ್ವಜಾರೋಹಣ ಮಾಡಬೇಕೆಂದು ಮಂಗಳವಾರ ಸರಕಾರ ಅದೇಶ ಹೊರಡಿಸಿದೆ.

ಈ ಸಂಬಂಧ ಒಳ್ಳಾಡಳಿತ ಇಲಾಖೆ ಆದೇಶ ಹೊರಡಿಸಿದ್ದು, ರಾಜ್ಯದಲ್ಲಿ ಸಚಿವ ಸಂಪುಟ ವಿಸ್ತರಣೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ನೇಮಕವಾಗದ ಹಿನ್ನೆಲೆಯಲ್ಲಿ ಸ್ವಾತಂತ್ರ್ಯೋತ್ಸವ ದಿನಾಚರಣೆಯಂದು ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಆಯಾ ಜಿಲ್ಲಾಧಿಕಾರಿಗಳು ಧ್ವಜಾರೋಹಣ ನೆರವೇರಿಸುವಂತೆ ಸರಕಾರ ಆದೇಶ ಹೊರಡಿಸಿದೆ.

ಇದೇ 15ರಂದು ಆಚರಿಸುವ ಸ್ವಾತಂತ್ರ್ಯ ದಿನಾಚರಣೆಯಂದು ಬೆಂಗಳೂರು ನಗರ ಜಿಲ್ಲೆಯನ್ನು ಹೊರತುಪಡಿಸಿ ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಆಯಾ ಜಿಲ್ಲಾಧಿಕಾರಿಗಳು, ಉಪ ವಿಭಾಗಗಳಲ್ಲಿ ಉಪ ವಿಭಾಗಾಧಿಕಾರಿಗಳು ಮತ್ತು ತಾಲೂಕುಗಳಲ್ಲಿ ತಹಶೀಲ್ದಾರ್ ಅವರು ಧ್ವಜಾರೋಹಣ ಮಾಡಬೇಕು. ರಾಜ್ಯದಲ್ಲಿ ಬಹುತೇಕ ಜಿಲ್ಲೆಗಳಲ್ಲಿನ ನೆರೆಯ ಕಾರಣದಿಂದಾಗಿ ಸ್ವಾತಂತ್ರ್ಯ ದಿನಾಚರಣೆಯನ್ನು ಸರಳವಾಗಿ ಆಚರಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಬೆಂಗಳೂರಿನ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ನಡೆಯುವ ಪ್ರಧಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಧ್ವಜಾರೋಹಣ ನೆರವೇರಿಸಲಿದ್ದಾರೆ.